# ಋಣವೆಂಬ ಸೂತಕವು ಬಹು ಬಾಧೆ ಪಡಿಸುತಿದೆ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 26.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 133.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 91.
4. **Note:** The lyrics given without highlights are as per Ref. 3 and fully matches with the singer.
5. **Note:** The lyrics given in green highlights are as per Ref. 1 and the lyrics given in yellow highlights are as per Ref. 2.
6. **Note:** The Ankita is same all the three books above.

ರಾಗ: ಮುಖಾರಿ ತಾಳ: ಅಟ್ಟ

ಋಣವೆಂಬ ಸೂತಕವು ಬಹು ಬಾಧೆ ಪಡಿಸುತಿದೆ ॥ ಪ ॥
ಗುಣನಿಧಿಯೆ ನೀನೆನ್ನ ಋಣವ ಪರಿಹರಿಸೋ ॥ ಅಪ ॥

ಕೊಟ್ಟವರು ಬಂದೆನ್ನ ನಿಷ್ಠುರಂಗಳನಾಡಿ
ಕೆಟ್ಟ ಬೈಗಳ ಬೈದು ಮನದಣಿಯಲು
ದಿಟ್ಟತನವನು ಬಿಟ್ಟು ಕಳೆಗುಂದಿದೆನಯ್ಯ
ಸೃಷ್ಟಿಗೊಡೆಯನೆ ಎನ್ನ ಋಣವ ಪರಿಹರಿಸೋ ॥ ೧ ॥

ಅವನ ಒಡವೆಯ ತಂದು ದಾನ ಧರ್ಮವ ಮಾಡೆ
ಅವನಿಗಲ್ಲದೆ ಪುಣ್ಯ ಇವಗ್ಯಾವುದು
ಅವನ ಒಡವೆಗಳಿಂದ ತೀರ್ಥಯಾತ್ರೆಯ ಮಾಳ್ಪ
ಇವನ ಜೀವನ ಬಾಡಿಗೆತ್ತಿನಂದದಲಿ ॥ ೨ ॥

ಆಳಿದೊಡೆಯನ ಮಾತು ಕೇಳಿ ನಡೆಯಲು ಬಹುದು
ಊಳಿಗವ ಮಾಡಿ ಮನದಣಿಯಬಹುದು
ಕಾಳಗದಿ ಪೊಕ್ಕು ಕಡಿದಾಡಿ ಜಯಿಸಲುಬಹುದು
ಪೇಳಲಳವಲ್ಲ ಋಣದವಗೊಂದು ಸೊಲ್ಲ ॥ ೩ ॥

ಹೆತ್ತ ಸೂತಕ ಮತ್ತೆ ಹತ್ತು ದಿನಗಳಿಗೆ ಪರಿಹಾರ

ಮೃತ್ಯು ಸೂತಕವು ಹನ್ನೊಂದು ದಿನಕೆ
ಮತ್ತೆ ಋಣ ಸೂತಕವು ಜನ್ಮ ಜನ್ಮಾಂತರಕೆ
ಎತ್ತ ಹೋದರು ಬಿಡದೆ ಬೆನ್ನತ್ತಿ ಬಹುದು ॥ ೪ ॥

ಬಂಧುಬಳಗದ ಮುಂದೆ ಬಹು ಮಾನವು ಹೋಗಿ
ಅಂದವಳಿದೆನೊ ಈ ವಿಧ ಋಣದೊಳು
ಇಂದಿರಾ ರಮಣ ಶ್ರೀ ಪುರಂದರ ವಿಠಲನೆ
ಇಂದೆನ್ನ ಋಣವ ಪರಿಹರಿಸಯ್ಯ ದೊರೆಯೆ ॥ ೫ ॥

**Note:** The lyrics given in green highlights are as per Ref. 1 and the lyrics given in yellow highlights are as per Ref. 2.

ರಾಗ: ಕಾಂಬೋಧಿ     ತಾಳ: ಝಂಪೆ

| | |
|---|---|
| ಋಣವೆಂಬ ಸೂತಕವು ಬಹು ಬಾಧೆ ಪಡಿಸುತಿದೆ ॥ ಪ ॥ | ಋಣವೆಂಬ ಸೂತಕವು ಬಹು ಬಾಧೆ ಪಡಿಸುತಿದೆ |
| ಗುಣನಿಧಿಯೆ ನೀನೆನ್ನ ಋಣವ ಪರಿಹರಿಸೋ ॥ ಅಪ ॥ | ಗುಣನಿಧಿಯೆ ನೀನೆನ್ನ ಋಣವ ಪರಿಹರಿಸೋ |
| | |
| ಒಡಲಿನಾಸೆಗೆ ಪರರ ಒಡವೆಗಳನೆ ತಂದು | ಒಡಲಿನಾಸೆಗೆ ಪರರ ಕಡೆಯಿಂದ ಧನವನ್ನು |
| ಬಿಡದೆ ವೆಚ್ಚವ ಮಾಡಿ ತೋಷ ಪಡುವೆ | ತಡೆಯದಲೆ ತಂದು ಸಂತೋಷ ಪಡುವೆ |
| ಕೊಡುವ ವೇಳೆಗೆ ಅವರ ಕೆಡು ನುಡಿಗಳನು ನುಡಿವೆ | ಕೊಡುವ ವೇಳೆಗೆ ಅವರ ಬಿರು ನುಡಿಗಳನು ಕೇಳ್ವ |
| ಕಡು ಮಹಾ ಪಾತಕವ ಪರಿಹರಿಸೊ ಹರಿಯೆ ॥ ೧ ॥ | ಕಡು ಪಾಪವನ್ನು ನೀ ಕಡೆಹಾಯಿಸಯ್ಯ |
| | |
| ಕೊಟ್ಟವರು ಬಂದೆನ್ನ ನಿಷ್ಠುರಗಳನಾಡಿ | ಕೊಟ್ಟ ದೊರೆಗಳು ಬಂದು ನಿಷ್ಠುರದ ಮಾತಾಡಿ |
| ಕೆಟ್ಟ ಬೈಗಳ ಬೈದು ಮನದಣಿಯಲು | ಎಷ್ಟು ಬೈವರೊ ತಮ್ಮ ಮನದಣಿಯಲು |
| ದಿಟ್ಟತನವನು ಬಿಟ್ಟು ಕಳೆಗುಂದಿದೆನಯ್ಯ | ದಿಟ್ಟತನವಿಲ್ಲದೆ ಕಳೆಗುಂದಿದೆನಯ್ಯ |
| ಸೃಷ್ಟಿಗೊಡೆಯನೆ ಎನ್ನ ಋಣವ ಪರಿಹರಿಸೋ ॥ ೨ ॥ | ಸೃಷ್ಟಿಗೊಡೆಯನೆ ಎನ್ನ ಕಷ್ಟ ಪರಿಹರಿಸೋ |
| | |
| ಆಳಿದೊಡೆಯನ ಮಾತ ಕೇಳಿ ನಡೆಯಲು ಬಹುದು | ಆಳಿದೊಡೆಯನ ಮಾತ ಕೇಳಿ ನಡೆಯಲು ಬಹುದು |
| ಊಳಿಗವ ಮಾಡಿ ಮನದಣಿಯಬಹುದು | ಊಳಿಗವ ಮಾಡಿ ಮನದಣಿಯಬಹುದು |
| ಕಾಳಗವ ಪೊಕ್ಕು ಕಡಿದಾಡಿ ಜಯಿಸಲುಬಹುದು | ಕಾಳಗವ ಪೊಕ್ಕು ಕಡಿದಾಡಿ ಜಯಿಸಲುಬಹುದು |
| ಪೇಳಲಳವಲ್ಲ ಋಣದವಗೊಂದು ಸೊಲ್ಲ ॥ ೩ ॥ | ಪೇಳಲಳವಲ್ಲ ಋಣದವಗೊಂದು ಸೊಲ್ಲ |
| | |
| ಹರಿವ ಹಾವನು ತೆಗೆದು ಶಿರಕೆ ಸುತ್ತಲು ಬಹುದು | ಹರಿವ ಹಾವನು ಹಿಡಿದು ತಲೆಗೆ ಸುತ್ತಲು ಬಹುದು |
| ಉರಿವ ಉರಿಯೊಳು ಪೊಕ್ಕು ಕುಣಿಯ ಬಹುದು | ಮುರಿವ ಮಾಳಿಗೆಯ ಕೈಯೊಳು ನಿಲಿಸ ಬಹುದು |
| ಮುರಿವ ಮಾಳಿಗೆಗೆ ಕೈಯೊಡ್ಡಿ ನಿಲ್ಲಿಸ ಬಹುದು | ಉರಿವ ಉರಿಯೊಳು ಹೊಕ್ಕು ಹೊರ ಹೊರಟು ಬರ ಬಹುದು |

ಧರೆಯೊಳಗೆ ಋಣದವನ ಜಯಿಸಲಳವಲ್ಲ ॥ ೪ ॥

(ಬೆರೆದು) ಸೇರಲು ಬಹುದು ವೈರಿಗಳ ಮನೆಯ

ಹೆತ್ತ ಸೂತಕ ಮತ್ತೆ ಹತ್ತು ದಿನ ಪರಿಯಂತ
ಮೃತ್ಯು ಸೂತಕವು ಹನ್ನೊಂದು ದಿವಸ
ಮತ್ತೆ ಋಣ ಸೂತಕವು ಜನ್ಮ ಜನ್ಮಾಂತರದಿ
ಎತ್ತ ಪೋದರು ಬಿಡದೆ ಬೆನ್ನಟ್ಟ ಬಹುದು ॥ ೫ ॥

ಹೆತ್ತ ಸೂತಕ ಹತ್ತು ದಿನಕೆ ಪರಿಹಾರವು
ಮೃತ್ಯು ಸೂತಕವು ಹನ್ನೆರಡು ದಿನವು
ಮತ್ತೆ ಋಣ ಸೂತಕವು ಜನ್ಮ ಜನ್ಮಾಂತರದಿ
ಹತ್ತಿಕೊಂಡಿಹುದು ಎತ್ತಲು ಹೋಗಗೊಡದೆ

ಅವನ ಒಡವೆಗಳಿಂದ ದಾನ ಧರ್ಮವ ಮಾಡೆ
ಅವನಿಗಲ್ಲದೆ ಪುಣ್ಯ ಇವನಿಗುಂಟೆ
ಅವನ ದ್ರವ್ಯಗಳಿಂದ ತೀರ್ಥ ಯಾತ್ರೆಯ ಮಾಡೆ
ಇವನ ಜೀವನವು ಬಾಡಿಗೆ ಎತ್ತಿನಂತೆ ॥ ೬ ॥

ಅವರ ದ್ರವ್ಯವ ದಾನ ಧರ್ಮವನು ಮಾಡಿದರೆ
ಅವರಿಗಲ್ಲದೆ ಪುಣ್ಯ ಇವರಿಗುಂಟೆ
ಅವರ ದ್ರವ್ಯದಿ ತೀರ್ಥ ಯಾತ್ರೆಯ ಮಾಡಿದರೆ
ಅವರ ಮನೆ ಬಾಡಿಗೆಯ ಎತ್ತಿನಂದದಲಿ

ಬಂಧುಬಳಗದ ಮುಂದೆ ಬಹು ಮಾನವು ಹೋಗಿ
ಅಂದವಳಿದೆನು ನಾನು ನೊಂದು ಋಣದಿ
ಇಂದಿರೆಯ ಅರಸ ಶ್ರೀ ಪುರಂದರ ವಿಠಲನೆ
ಇಂದೆನ್ನ ಋಣವ ಪರಿಹರಿಸಯ್ಯ ದೊರೆಯೆ ॥ ೭ ॥

ಬಂಧುಗಳ ಮುಂದೆನ್ನ ಬಹು ಮಾನಗಳು ಹೋಗಿ
ಕಂದಿ ಕುಂದಿದೆನಯ್ಯ ಕರುಣಾನಿಧೆ
ಇಂದಿರಾ ರಮಣ ಶ್ರೀ ಪುರಂದರ ವಿಠಲನೆ
ಇಂದೆನ್ನ ಋಣದಿಂದ ಕಡೆಹಾಯಿಸಯ್ಯ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಹಾಡಿನಲ್ಲಿ ದಾಸರು ಸಾಮಾನ್ಯವಾಗಿ ಸಾಲಗಾರನ ಸಂಕಷ್ಟಗಳನ್ನು ಹೇಳಿದ್ದಾರೆ. ಆದರೆ ಪುರಂದರ ದಾಸರ ಜೀವನಕ್ಕೆ ಇದು ಅನ್ವಯಿಸಲಾರದು.

**ಋಣ** = ಸಾಲ

**ಸೂತಕ** = ಮೈಲಿಗೆ

**ಕಡೆಹಾಯಿಸು** = ವೃದ್ಧಿ

**Classification:** Keerthane
**Ankita:** Sri Purandara Vittala
**Location:** NA
**Category:** Samsara Jigupse, Aartha Bhava.
**Sub-Category:** runa, sutaka, abharana, rokka, papa, bayyi, arasa, jaya, uraga, janma, dana, dharma, punya, bandhu, santosha, shatru,
**Pravachana:** NA
**Explanation:** NA